ವಿಷಯ: ಬಾದಾಮಿ ತಾಲ್ಲೂಕಿನಲ್ಲಿ ರಸ್ತೆ ಹದಗೆಟ್ಟಿರುವುದು.

1168 ( 1716)

ಶ್ರೀ ಬಿ.ಬಿ.ಚಿಮ್ಮನಕಟ್ಟಿ (ಬಾದಾಮಿ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

1) ಬದಾಮಿ ತಾಲ್ಲೂಕಿನಲ್ಲಿ ಗೋವನಕೊಪ್ಪ ಹೆಬ್ಬಳ್ಳಿ ರಸ್ತೆ ಅತೀ ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಸದರಿ ರಸ್ತೆಯ ಅಭಿವೃದ್ಧಿಗೆ ಸರ್ಕಾರ ಕೈಗೊಂಡ ಕ್ರಮವೇನು?

3) ಗೋವನಕೊಪ್ಪದಿಂದ ಹೆಬ್ಬಳ್ಳಿ ಹಾಗೂ ಹೆಬ್ಬಳ್ಳಿಯಿಂದ ಬದಾಮಿ ಹಾಗೂ ಹೆಬ್ಬಳ್ಳಿಯಿಂದ ಬೂದಿಹಾಳ ಮಾರ್ಗವಾಗಿ ಬದಾಮಿಗೆ ತಲುಪುವ ರಸ್ತೆ ಅಭಿವೃದ್ಧಿಗೆ 1998-99ರಲ್ಲಿ ಸರ್ಕಾರದವರು ನಿರ್ದಿಷ್ಟವಾಗಿ ಎಷ್ಟು ಹಣ ಒದಗಿಸಲಾಗುತ್ತದೆ?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):

1) ಹೌದು. ಜಿಲ್ಲಾ ಮೆಲ್ಪೆ ರಸ್ತೆ ಭಾಗ ಅಭಿವೃದ್ಧಿಯಾಗಬೇಕು.

2) ಈ ರಸ್ತೆ 27 ಕಿಮೀ ಇದ್ದು, ವಿಧಾನಸಭಾ ಕ್ಷೇತ್ರದ 30 ಲಕ್ಷ ರೂ. ಅನುದಾನ ಕಾರ್ಯಕ್ರಮದಡಿಯಲ್ಲಿ 5.00 ಕಿ.ಮೀ. ಮರ್ರಂ ಖಡೀಕರಣ ಹಾಗೂ 4 ಕಿ.ಮೀ ಡಾಂಬರೀಕರಣ ಮಂಜೂರಾಗಿರುತ್ತದೆ. ಇದರಲ್ಲಿ 5.00 ಕಿ.ಮೀ. ಖಡೀಕರಣ ಹಾಗೂ 1.50 ಕಿ.ಮೀ. ಡಾಂಬರೀಕರಣ ಕಾಮಗಾರಿ ಮಾಡಲಾಗಿದೆ. 3054 ಲೆಕ್ಕ ಶೀರ್ಷಿಕೆಯಡಿಯಲ್ಲಿ 2.00 ಕಿ.ಮೀ. ಡಾಂಬರೀಕರಣ ಹಾಗೂ 1.00 ಕಿ.ಮೀ ಖಡೀಕರಣ ಯೋಜನೇತರ ಅಡಿಯಲ್ಲಿ ಮಂಜೂರಾಗಿದೆ.

3. ಬದಾಮಿಯಿಂದ ಗೋವನಕೊಪ್ಪ ರಸ್ತೆಯ ಮಾರ್ಗ (ಬೊಳಚಗುಡ್ಡ, ಹೆಬ್ಬಳ್ಳಿ) ಭಾಗವಾದ ಚೊಳಚಗುಡ್ಡ-ಗೋವಿನಕೊಪ್ಪ ರಸ್ತೆಯ ಸುಧಾರಣೆಗಾಗಿ 1998-99ರ ಆಯವ್ಯಯದಲ್ಲಿ ಪ್ರಸಕ್ತ ವರ್ಷಕ್ಕೆ 2.30 ಲಕ್ಷ ರೂ.ಗಳ ಅನುದಾನವನ್ನು ಯೋಜನೆ ಶೀರ್ಷಿಕೆ ಅಡಿಯಲ್ಲಿ ಒದಗಿಸಲಾಗಿದೆ.

ವಿಷಯ: ಬಂಕಾಪುರ-ಜತ್ ರಸ್ತೆಯನ್ನೂ ಅಭಿವೃದ್ಧಿಗೊಳಿಸುವುದು.

1169 ( 1713)

ಶ್ರೀ ಬಿ.ಬಿ.ಚಿಮ್ಮನಕಟ್ಟಿ (ಬದಾಮಿ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?